

## 'ದಮ್ಮು'ರಾಯರು!

ನಮ್ಮ ತಂದೆ ಬೀಡಿ ಪ್ರಿಯರಾಗಿದ್ದು, ಪರಿಣಾಮ ವಯೋಸಹಜತೆಯಿಂದ ಕೆಮ್ಮು, ದಮ್ಮು, ಅಸ್ತಮಾ ಆಗಾಗ ನೆನಪಿಸುತ್ತಿತ್ತು!. ಉಸಿರಾಟ ಸಮಸ್ಯೆಯಿಂದ ಒಮ್ಮೆ ಅವರನ್ನು ಕರೆದುಕೊಂಡು ದವಾಖಾನೆಗೆ ಹೋಗಿದ್ದೆ. ಕೌಂಟರ್‌ನಲ್ಲಿ ವಿವರ ಭರ್ತಿ ಮಾಡುತ್ತಿದ್ದೆ. ಅವರೂ ನನ್ನ ಪಕ್ಕ ಕೂತಿದ್ದು, ನಾನು ಮಾಹಿತಿ ಕೇಳಲು ಕೌಂಟರ್ ಕಡೆ ಹೋದೆ. ಕೌಂಟರ್‌ನವರು 'ಸರದಿ ಬಂದಾಗ ಕರೆಯುವೆ ಕೂತಿರಿ' ಎಂದರು.

ನಮ್ಮ ತಂದೆಯ ಸರದಿ ಬಂದಾಗ ಯಾರು 'ದಮ್ಮುರಾಯರು ಬನ್ನಿ!' ಅಂದಾಗ ನಾನು, 'ಅದು ದಮ್ಮುರಾಯರು ಅಲ್ಲ ಧರ್ಮರಾವ್. ನಮ್ಮ ತಂದೆ ಹೆಸರು ಎಂದೆ.

ನಾನು ಭರ್ತಿ ಮಾಡಿದ ಫಾರಂ ತೋರಿಸುತ್ತಾ ನೋಡಿ ಎಂದರು. ಅದರಲ್ಲಿ ಧರ್ಮ ರಾವ್ ಹೊಡೆದು ಹಾಕಿ 'ದಮ್ಮುರಾಯರು' ಎಂದು ಬರೆದಿತ್ತು!.

ನಾನು ಆ ಬರವಣಿಗೆ ನೋಡಿದಾಗ ಅದು ತಂದೆಯ ಕೈ ಬರಹ. ಈ ಅವಸ್ಥೆಯಲ್ಲೂ ತಮಾಷೆ ಕಂಡು ಅಲ್ಲಿದ್ದ ಎಲ್ಲರಿಗೂ ನಗು ತಡೆಯಲಾಗಿಲ್ಲ!

**ನಗರ ಗುರುದೇವ್ ಭಂಡಾರ್ಕರ್**

---

## ಮೂರರ ಸ್ಥಾನ ದೇವಸ್ಥಾನ!

ಐದನೆಯ ತರಗತಿಯಲ್ಲಿ ಉಪಾಧ್ಯಾಯ ರಮೇಶ್ ಅವರು ಬಿಡಿ, ಹತ್ತು, ನೂರು, ಸಾವಿರ, ಹತ್ತು ಸಾವಿರ ಸಂಖ್ಯೆಗಳ ಸ್ಥಾನ ಮತ್ತು ಅವುಗಳ ಬೆಲೆ ಹೇಳಿಕೊಟ್ಟರು 13,485 ಸಂಖ್ಯೆಯನ್ನು ಬೋರ್ಡಿನ ಮೇಲೆ ಬರೆದರು. ಹದಿಮೂರು ಸಾವಿರದ ನಾಲ್ಕು ನೂರ ಎಂಬತ್ತೈದರಲ್ಲಿ ಮೂರರ ಸ್ಥಾನ ಏನು? ಅಂತ ತೂಕಡಿಸುತ್ತ ಇದ್ದ ಪ್ರವೀಣನನ್ನು ಕೇಳಿದರು.

ತೂಕಡಿಸುತ್ತ ಇದ್ದ ಪ್ರವೀಣ ಸಾವರಿಸಿಕೊಂಡು ಮೂರರ ಸ್ಥಾನ ದೇವಸ್ಥಾನ ಸ್ಸಾರ್ ಎಂದು ಉತ್ತರಿಸಿದ. ಕಾರಣ ಪ್ರವೀಣರ ತಂದೆ ದೇವಸ್ಥಾನದ ಪೂಜಾರಿ ಆಗಿದ್ದರು. ತಮ್ಮ ಅದೃಷ್ಟ ಸಂಖ್ಯೆ 3 ಅಂತ ನಂಬಿದ್ದರಿಂದ ಗರ್ಭಗುಡಿಯಲ್ಲಿ 3 ಅಂತ ಅರಿಶಿನ ಮತ್ತು ಕುಂಕುಮದಲ್ಲಿ ತಿದ್ದಿದ್ದರು.




ಗಣಿತದ ಮೇಷ್ಟ್ರು ತುಂಬಾ ಸ್ಟ್ರಿಕ್ಟ್ ಆದ್ದರಿಂದ ಯಾರೊಬ್ಬರೂ ನಗುವ ಧೈರ್ಯ ಮಾಡಲಿಲ್ಲ.

**ಮಲ್ಲಿಕಾರ್ಜುನ ಸುರಧೇನುಪುರ**